ಇಂದು ದಿನಾಂಕಃ 30.10.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಗಳ ಪರ ಶ್ರೀ ಜಿ ಎಸ್ ಎಮ್ ವಕೀಲರಿಂದಃ

1. 1 ಮತ್ತು 2 ನೇ ವಾದಿಯರು ಕಳಗೊಂಡ ಗ್ರಾಮದಲ್ಲಿ ವಾಸವಿದ್ದಾರೆ. ಅವರು ಮೊದಲಿನಿಂದಲು ಕಳಕೊಂಡ ಗ್ರಾಮದಲ್ಲಿಯೇ ವಾಸವಾಗಿದ್ದಾರೆ. ಅವರ ತಂದೆ ನಿಂಗಪ್ಪ ಕಳಗೊಂಡ ಗ್ರಾಮದಲ್ಲಿ ವಾಸವಿದ್ದರು. ಅವರು ಅಲ್ಲಿಯೇ ಮರಣ ಹೊಂದಿರುತ್ತಾರೆ. ಅವರು ಶಿಕಾರಿಪುರದ ಕಡೆನಂದಿಹಳ್ಳಿ ಗ್ರಾಮದಲ್ಲಿ ವಾಸವಿದ್ದು ಅಲ್ಲಿಯೇ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2 ನೇ ವಾದಿಯರು ಅವರ ಹುಟ್ಟಿನಿಂದಲೂ ಮತ್ತು ಆತನ ತಂದೆ ಸಾಯುವವರೆಗೂ ಮತ್ತು ನಂತರವೂ ಕಡೆನಂದಿಹಳ್ಳಿ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ.

2. ದಾವಾ ಆಸ್ತಿಯು ಒಟ್ಟು 32 ಗುಂಟೆ ಕ್ಷೇತ್ರವನ್ನು ಹೊಂದಿರುತ್ತದೆ ದಾವಾ ಆಸ್ತಿಯು ಕಳಗೊಂಡ ಗ್ರಾಮದ ದಕ್ಷಿಣ ದಿಕ್ಕಿಗೆ ಬರುತ್ತದೆ. ದಾವಾ ಆಸ್ತಿಯ ಆಜು ಬಾಜು ನನ್ನ ಆಸ್ತಿ ಬರುವುದಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಮಲ್ಲಯ್ಯ ಸಿದ್ದಪ್ಪ ಇವರ ಜಮೀನು, ವಾದಿಯರಿಗೆ ಸೇರಿ ಸ್ವಂತ ಆಸ್ತಿ ಉತ್ತರಕ್ಕೆ ಬೀರಪ್ಪ ದೊಡ್ಡಮನೆ ಇವರ ಜಮೀನು ಮತ್ತು ದಕ್ಷಿಣಕ್ಕೆ ರಾಮನಗೌಡ ಮುದಿಗೌಡ ಇವರ ಜಮೀನು ಬರುತ್ತದೆ.

3. ಕಳಗೊಂಡ ಗ್ರಾಮದಿಂದ ಸೋಮನಹಳ್ಳಿ ಗ್ರಾಮದಲ್ಲಿ ಕಾಲುದಾರಿ ಇದೆ ಎಂದರೆ ಸರಿ. ಸದರಿ ಕಾಲು ದಾರಿಯ ದಾವಾ ಆಸ್ತಿಯ ಮೂಲೆಯ ಭಾಗದಲ್ಲಿ ಹೋಗುತ್ತಿತ್ತು ಎಂದರೆ ಸರಿ. ಸದರಿ ಕಾಲು ದಾರಿಯು ಈಗ 20 ವರ್ಷಗಳಿಂದಲೂ ಬಂದು ಎಂದರೆ ಸರಿ. ಸದರಿ ಜಮೀನು ಮತ್ತು ಅಕ್ಕ ಪಕ್ಕದವರ ಜಮೀನು ಕಾಲುದಾರಿಯನ್ನು ಉಳುಮೆ ಮಾಡಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಕಳಗೊಂಡ ಗ್ರಾಮದ ದಕ್ಷಿಣ ದಿಕ್ಕಿಗೆ ನನಗೆ ಸೇರಿದ ಯಾವುದೇ ಆಸ್ತಿ ನನಗೆ ಬರುವುದಿಲ್ಲ ಎಂದರೆ ಸರಿ. ಹಾಗಾಗಿ ದಾವಾ ಆಸ್ತಿಗೆ ಹೋಗಿ ಬರಲಯ ಇದುವರೆಗು ನನಗೆ ಯಾವುದೇ ಸಂದರ್ಭ ಒದಗಿರುವುದಿಲ್ಲ ಎಂದರೆ ಸರಿ. ಆದ್ದರಿಂದ ದಾವಾ ಆಸ್ತಿಯನ್ನು ಯಾರು ವ್ಯವಸಾಯ ಮಾಡುತ್ತಿದ್ದಾರೆಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆಯಲು ವಾದಿಯವರೆ ದಾವಾ

ಆಸ್ತಿಯನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

4. ದಾವಾ ಆಸ್ತಿಯನ್ನು ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ಪ್ರಮಾಣ ಪತ್ರಿಕೆ ವಿಷಯಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ ಈಗ 54 ವರ್ಷ. ನಾನು ಪ್ರಮಾಣ ಪತ್ರಿಕೆಯಲ್ಲಿ ಬರೆಸಿರುವ ವಾದಿಯರ ವಂಶಾವಳಿಯು ನಾನು ಹೇಳಿ ಬರೆಸಿರುವೆಯಾ ಎಂದರೆ ಸಾಕ್ಷಿಯು ಹಿಂದಿನ ವಂಶಾವಳಿಯನ್ನು ಬಗ್ಗೆ ನನಗೆ ಗೊತ್ತಿಲ್ಲ, ಇತ್ತೀಚಿನ ವಂಶಾವಳಿ ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ. ನನಗೆ ಇತ್ತೀಚಿನ ವಂಶಾವಳಿಯಲ್ಲಿ ಎಷ್ಟು ತಲೆಮಾರುಗಳು ಗೊತ್ತುಎಂದರೆ ಸಾಕ್ಷಿಯು 35 ವರ್ಷಗಳಿಂದ ನನಗೆ ವಂಶಾವಳಿಯ ಬಗ್ಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

5. ನಾನು ಪ್ರತಿವಾದಿಯರ ಕುಟುಂಬದ ವಂಶಾವಳಿಯ ಬಗ್ಗೆ ನನ್ನ ಪ್ರಮಾಣ ಪತ್ರಿಕೆಯಲ್ಲಿ ಹೇಳಿ ಬವರೆಸಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ವಂಶಾವಳಿಯ ಯಾವ ರೀತಿ ಸಂಬಂಧಿಸಿದೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ದಾವಾ ಆಸ್ತಿಯನ್ನು ಯಾರು ಸಾಗುವಳಿ ಮಾಡುತ್ತಿದ್ದಾರೆ ಎಂಬುದನ್ನು ಹೊರತುಪಡಿಸಿ ಮತ್ತ್ಯಾವುದೇ ವಿಷಯಗಳು ಗೊತ್ತಿರುವುದಿಲ್ಲ ಎಂದರೆ ಸರಿ. ವಾದಿ ಮತ್ತು ಷತ್ರಿವಾದಿಯರು ಮೂಲತ: ಒಂದೇ ಗರಾಣೆಗೆ ಸೇರಿದ ಕುಟುಂಬದವರು ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯನ್ನು ವಾದಿಯರೆ ಸಾಗುವಳಿ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮೊದಲಿಗೆ ಪ್ರತಿವಾದಿಯರ ಅಜ್ಜ, ನಂತರ ಪ್ರತಿವಾದಿಗಳ ತಂದೆ ಮತ್ತು ಈಗ ಪ್ರತಿವಾದಿಯರು ಸ್ವಾಧೀನದಲ್ಲಿ ಇಟ್ಟುಕೊಂಡು ವಹಿವಾಟು ಮಾಡುತ್ತಿದ್ದಾರೆ ಎಂಬುವ ಪ್ರಶ್ನೆಗೆ ಸಾಕ್ಷಿಯು ನನಗೆ ಮೊದಲಿನ ವಿಷಯಗಳು ಗೊತ್ತಿರುವುದಿಲ್ಲ, ಆದರೆ ಪ್ರಸ್ತುತ ವಾದಿಯರೆ ದಾವಾ ಆಸ್ತಿಯನ್ನು ವಹಿವಾಟು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. 1 ಮತ್ತು 2 ನೇ ವಾದಿಯರು ಶಿಕಾರಿಪುರದ ಕಡೆನಂದಿಹಳ್ಳಿ ಗ್ರಾಮದಲ್ಲಿ ವಾಸವಿದ್ದರು ಕೂಡಾ ಕಳಗೊಂಡ ಗ್ರಾಮದಲ್ಲಿ ವಾಸವಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. 1 ಮತ್ತು 2 ನೇ ವಾದಿಯರ ತಂದೆ ಪ್ರತಿವಾದಿಯರ ಮೇಲೇ ಈ ಹಿಂದೆ ಹೂಡಿದ್ದ ದಾವೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-xxx

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.